ಉದ್ಭವಿಸಿದ ಸಮಸ್ಯೆಗಳ ಪರಿಶೀಲನೆಗಾಗಿ ಶಾಸಕರನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸಲಾಗಿದೆ.

ಶ್ರೀ ಶಿವಾನಂದ ಎಚ್. ಕೌಜಲಗಿ.—ಸನ್ಮಾನ್ಯ ಅಧ್ಯಕ್ಷರೇ, ಯಾವ್ಯಾವ ಸಹಕಾರೀ ಕಾರ್ಖಾನೆಗಳು ನಷ್ಟದಲ್ಲಿರುತ್ತವೆ ಅವುಗಳ ಹೆಸರುಗಳನ್ನು ಓದಗಿಸಬೇಕು. ಮತ್ತು ಕಬ್ಬು ದೊರೆಯದ ಕಾರಣ ಕಾರ್ಖಾನೆಗಳು ನಷ್ಟದಲ್ಲಿದೆ ಎಂದು ಹೇಳಿದ್ದಾರೆ ಇದು ನಿಜವಲ್ಲ. ಮಿಸ್ ಮ್ಯಾನೇಜ್‌ಮೆಂಟಿನಿಂದ ನಷ್ಟದಲ್ಲಿದೆ ಆದ ಕಾರಣ ಸರಕಾರದವರು ಇವುಗಳ ಬಗ್ಗೆ ಯಾವ ಕ್ರಮವನ್ನು ಕೈಗೊಂಡಿರುತ್ತಾರೆ ? ಸಹಕಾರ ಸಂಘದಲ್ಲಿ ಮಿಸ್ ಮ್ಯಾನೇಜ್‌ಮೆಂಟ್ ಇದ್ದಂತಹ ಎಷ್ಟು ಕಾರ್ಖಾನೆಗಳ ಮೇಲೆ ನೋಟೀಸನ್ನು ಕೊಟ್ಟಿದ್ದಾರೆ ಮತ್ತು ಯಾವ ಕ್ರಮವನ್ನು ಕೈಗೊಂಡಿದ್ದಾರೆ ?

ಶ್ರೀ ಜೆ. ಹೆಚ್. ಪಟೇಲ್.—ಕಬ್ಬು ದೊರಕದೇ ಇರುವುದು ಒಂದು ಕಾರಣ, ಅದೇ ಕಾರಣದಿಂದ ನಷ್ಟದಲ್ಲಿದೆ ಎಂದು ಹೇಳಲಿಲ್ಲ. ಕೆಲವು ಕಡೆ ಮಿಸ್ ಮ್ಯಾನೇಜ್‌ಮೆಂಟ್ ಕೂಡ ಇದೆ, ಅದು ಬರೀ ಸಹಕಾರೀ ವಲಯದಲ್ಲಿ ಮಾತ್ರ ಅಲ್ಲ, ಖಾಸಗೀ ವಲಯದಲ್ಲೂ ಕೂಡ ಮಿಸ್ ಮ್ಯಾನೇಜ್‌ಮೆಂಟ್ ಇದೆ. ಉದಾಹರಣೆಗೆ ಹೇಳುವುದಾದರೆ, ಹೊಸಪೇಟೆ ಹತ್ತಿರವಿರುವ ಸಾಲಾರ್‌ಜಂಗ್ ಕಾರ್ಖಾನೆಯಲ್ಲಿ ಮಿಸ್ ಮ್ಯಾನೇಜ್‌ಮೆಂಟ್ ಆಗಿದೆ. ಸಹಕಾರೀ ವಲಯದಲ್ಲಿರತಕ್ಕಂತಹ ಕಾರ್ಖಾನೆಗಳಲ್ಲಿ ಎದ್ದು ಕಾಣುತ್ತಿದೆ. ಕೇಂದ್ರ ಸರಕಾರದ ನೀತಿಯಲ್ಲಿ ಕೂಡ ಬದಲಾವಣೆಯಾಗಿದೆ ಮೊದಲು ಶೇಕಡ ೬೫–೩೫ ರೇಷಿಯೋ ಇತ್ತು ಅಂದರೆ ೩೫ ಅನ್ನು ಕಾರ್ಖಾನೆಗಳು ಫ್ರೀ ಸೇಲ್ ಮಾಡಿಬಹುದು ೬೫ ಅನ್ನು ಲೆವಿ ಕೊಡಬೇಕು ಎಂದು. ಈಗ ೫೦–೫೦ಕ್ಕೆ ಮಾಡಿರುವುದರಿಂದ ಕಾರ್ಖಾನೆಗಳಿಗೆ ಸಹಾಯವಾಗಿದೆ. ಮಾನ್ಯ ಸದಸ್ಯರು ಅಪೇಕ್ಷೆ ಪಟ್ಟಿರುವ ಹಾಗೆ ಸಹಕಾರೀ ವಲಯದಲ್ಲಿರತಕ್ಕಂತಹ ಯಾವ ಕಾರ್ಖಾನೆಗಳು ನಷ್ಟದಲ್ಲಿದೆ ಮಿಸ್ ಮ್ಯಾನೇಜ್‌ಮೆಂಟ್ ಕಾಣುತ್ತಿದೆ ಅವುಗಳಿಗೆ ಎಚ್ಚರಿಕೆಯ ನೋಟೀಸನ್ನು ಕೊಟ್ಟಿದ್ದೇವೆ. ಇನ್ನು ಕೆಲವು ಏನು ಮುಚ್ಚಿ ಹೋಗಿದೆ, ಅವುಗಳನ್ನು ಪುನರ್ಚೇತನಗೊಳಿಸುವುದಕ್ಕೆ ಸಾಧ್ಯವಿಲ್ಲ ಅನ್ನುವಂಥಾದ್ದನ್ನು ಮಾರಾಟ ಮಾಡುತ್ತಿದ್ದೇವೆ.

ಶ್ರೀ ಶಿವಾನಂದ ಎಚ್. ಕೌಜಲಗಿ.—ಯಾವ ಕಾರ್ಖಾನೆಗಳಿಗೆ ಎಚ್ಚರಿಕೆಯ ನೋಟೀಸ್ ಅನ್ನು ಕೊಟ್ಟಿದ್ದೀರಿ ಹಾಗೂ ಯಾವ ಸಹಕಾರ ಸಂಘಗಳು ನಷ್ಟದಲ್ಲಿವೆ ಅದರ ಹೆಸರು ಕೊಡಿ.

ಶ್ರೀ ಜೆ. ಹೆಚ್. ಪಟೇಲ್.—ಹೆಸರನ್ನು ಕೊಡುತ್ತೇನೆ.

ಹೊಸದುರ್ಗ ಕ್ಷೇತ್ರದಲ್ಲಿರುವ ಕುರಿಫಾರಂ

೬೩೨. ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೊಸದುರ್ಗ ಕ್ಷೇತ್ರದಲ್ಲಿ ಕುರಿ ಫಾರ್ಮ್‌ಗಳು ಮಂಜೂರಾಗಿ ಎಷ್ಟು ವರ್ಷಗಳಾದವು ಎಷ್ಟು ಫಾರ್ಮ್‌ಗಳು ಕೆಲಸ ಮಾಡುತ್ತಿವೆ ? (ಇವುಗಳ ಪ್ರಗತಿ ಬಗ್ಗೆ ವಿವರ ನೀಡುವುದು)

ಆ) ಸದರಿ ಕುರಿ ಫಾರ್ಮ್‌ಗಳಲ್ಲಿರುವ ವೈದ್ಯಾಧಿಕಾರಿಗಳು ಇತರೆ ಪಶು ಸಂಗೋಪನಾ ಜಾನುವಾರುಗಳ ರೋಗರುಜಿನಗಳನ್ನು ನೋಡಿಕೊಳ್ಳುವಂತೆ ಸರ್ಕಾರದವರು ಆದೇಶಿಸಿರುವರೇ ?

ಶ್ರೀ ಸಿದ್ದರಾಮಯ್ಯ (ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವೆಗಳ ಸಚಿವರು).—

ಅ) ಹೊಸದುರ್ಗ ಕ್ಷೇತ್ರದಲ್ಲಿ ಯಾವುದೇ ಕುರಿ ಫಾರ್ಮ್ ಮಂಜೂರಾಗಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

೧೨-೩೦ ಪಿ. ಎಂ.

ಶ್ರೀ ಜಿ. ರಾಮದಾಸ್.—ಸನ್ಮಾನ್ಯ ಅಧ್ಯಕ್ಷರೇ, ಸಚಿವರ ಉತ್ತರ ನೋಡಿದರೆ ಬಹಳ ಆಶ್ಚರ್ಯವಾಗಿದೆ. ನನ್ನ ಕ್ಷೇತ್ರದಲ್ಲಿ ಫಾರಂ ಇಲ್ಲ ಎಂದು ಉತ್ತರದಲ್ಲಿ ಹೇಳಿದ್ದಾರೆ. ಕುರಿ ಫಾರಂಗಳು ಸುಮಾರಾಗಿ ಅಲ್ಲಿ ಮಂಜೂರಾಗಿವೆ. ದಯವಿಟ್ಟು ಸಚಿವರು ಸರಿಯಾದ ಉತ್ತರ ತರಿಸಿ ಹೇಳಬೇಕು. ಮೂವತ್ತು ವರ್ಷಗಳಿಂದಲೂ ಇದೆ.

ಶ್ರೀ ಸಿದ್ದರಾಮಯ್ಯ.—ಕುರಿ ಫಾರಂಗಳು ಹೊಸದುರ್ಗ ಕ್ಷೇತ್ರದಲ್ಲಿ ಯಾವುದೂ ಇಲ್ಲ. ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆಗಳು ಹೊಸದುರ್ಗ ಕ್ಷೇತ್ರದಲ್ಲಿ ಮೂವತ್ತರ್ವ ವರ್ಷಗಳಿಂದಲೂ ಜಾರಿಯಲ್ಲಿರತಕ್ಕಂಥದ್ದು ನಿಜ. ಕುರಿ ಉಣ್ಣೆ ಅಭಿವೃದ್ಧಿ ಯೋಜನೆಗಳಿಗೆ ಬಹುಶಃ ಅವರು ಕನ್‌ಫ್ಯೂಸ್ ಮಾಡಿಕೊಂಡಿದ್ದಾರೆ. ಅಲ್ಲಿ ಎಂಟು ಉಣ್ಣೆ ಕೇಂದ್ರಗಳು ಹೊಸದುರ್ಗ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿವೆ. ಇದರ ಉದ್ದೇಶ ಅಲ್ಲಿರತಕ್ಕಂಥ ಹತ್ತು-ಇಪ್ಪತ್ತು ಸಾವಿರ ಕುರಿಗಳು ಇರತಕ್ಕಂಥ ಜಾಗದಲ್ಲಿ ಒಂದು ಸಣ್ಣ ಉಣ್ಣೆ ವಿಸ್ತರಣಾ ಕೇಂದ್ರ ಎಂದು ಮಾಡಿ ಉತ್ತಮ ತಳಿಯ ಟಗರುಗಳನ್ನು ಆ ಕುರಿ ಮಂದೆಯಲ್ಲಿ ಬಿಡತಕ್ಕಂಥದ್ದು. ಅಲ್ಲಿ ಕುರಿಗಳಿಗೆ ಉತ್ತಮ ಆಹಾರ ಒದಗಿಸತಕ್ಕಂಥದ್ದು ಮತ್ತು ವೈಜ್ಞಾನಿಕವಾಗಿ ಉಣ್ಣೆ ತೆಗೆಯತಕ್ಕಂಥದ್ದು. ಈ ರೀತಿ ಕಾರ್ಯಗಳನ್ನು ಎಂಟು ಕೇಂದ್ರಗಳಲ್ಲಿ ಹೊಸದುರ್ಗ ಕ್ಷೇತ್ರದಲ್ಲಿ ಮಾಡುತ್ತಿವೆ. ಹೊಸದುರ್ಗ ಕ್ಷೇತ್ರದಲ್ಲಿ ಒಂದು ಕೇಂದ್ರ ಇದೆ. ಅದರಲ್ಲಿ ಒಬ್ಬರು ಹಿರಿಯ ನಿರ್ದೇಶಕರು ಇರಂತಾರೆ ಮತ್ತು ಬೇರೆ ಬೇರೆ ಕೇಂದ್ರಗಳಲ್ಲಿ ಪಶು ಪರೀಕ್ಷಕರು ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಕುರಿ ಫಾರಂ ಇಲ್ಲ. ಅಲ್ಲಿರತಕ್ಕಂಥದ್ದು ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆ ಕಾರ್ಯಕ್ರಮ ನಿಮ್ಮ ತಾಲ್ಲೂಕಿನಲ್ಲಿ ಇದೆ.

ಶ್ರೀ ಜಿ. ರಾಮದಾಸ್.—ಅಲ್ಲಿ ಕುರಿ ಫಾರಂ ಇಲ್ಲದೆ ಉತ್ಪಾದನೆಯೇ ನಡೆಯುತ್ತಿಲ್ಲ. ಷೆಡ್ ಗಳಿಲ್ಲದೇ ಅಲ್ಲಿ ತೊಂದರೆಯಾಗಿದೆ. ಸಚಿವರು ನಮ್ಮ ಕ್ಷೇತ್ರಕ್ಕೆ ಭೇಟಿ ಕೊಟ್ಟು ಅಲ್ಲಿಯ ಪರಿಸ್ಥಿತಿಯನ್ನು ತಿಳಿಯುವುದು ಒಳ್ಳೆಯದು.

ಶ್ರೀ ಸಿದ್ದರಾಮಯ್ಯ.—ಕುರಿ ಫಾರಂನಲ್ಲಿ ಮಾತ್ರ ಕುರಿ ಇಟ್ಟಿರತಕ್ಕಂಥದ್ದು. ಅಲ್ಲಿರತಕ್ಕಂಥ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆಯಲ್ಲಿ ಟಗರುಗಳನ್ನು ಕುರಿ ಮಂದೆಯಲ್ಲಿ ಬಿಟ್ಟು ಅದರಿಂದ ಉತ್ತಮ ಮರಿಗಳನ್ನು ಪಡೆಯುವುದು ಆಗಿದೆ. ನಾನು ಅಲ್ಲಿಗೆ ಹೋಗಿ ಅಲ್ಲಿ ಏನಾದರೂ ತೊಂದರೆಗಳು ಇದ್ದರೆ ಅದನ್ನು ಸರಿಪಡಿಸಲಿಕ್ಕೆ ಪ್ರಯತ್ನ ಮಾಡಂತ್ತೇನೆ.

ಪ್ರಶ್ನೆ ಸಂಖ್ಯೆ. ೧೭೮ (೭೨೧)

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

ಅರಣ್ಯ ಉತ್ಪನ್ನಗಳು.

೭೨೧. ಶ್ರೀ ವಸಂತ ಬಂಗೇರ(ಬೆಳ್ಳಂಗಡಿ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಬೆಳೆಯುವ ಕಾಡುತ್ಪತ್ತಿಯನ್ನು ಅರಣ್ಯ ಇಲಾಖೆಯವರು ಮಾರಾಟ ಮಾಡುವ ಬಗ್ಗೆ ಅನುಸರಿಸುತ್ತಿರುವ ವಿಧಾನಗಳೇನು ?

ಆ) ಸದರಿ ತಾಲ್ಲೂಕಿನ ಕಾಡುತ್ಪತ್ತಿ ಹರಾಜಿನಿಂದ ಸರ್ಕಾರದ ಬೊಕ್ಕಸಕ್ಕೆ ಒಂದು ವರ್ಷಕ್ಕೆ ಬರುವ ಮೊತ್ತವೆಷ್ಟು ?

ಶ್ರೀ ಜಿ. ಎಸ್. ಬಾಗಲಕೋಟ್(ಅರಣ್ಯ ರಾಜ್ಯ ಮಂತ್ರಿಗಳು).—

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಬೆಳೆಯುವ ಕಾಡುತ್ಪತ್ತಿಯನ್ನು ಗಿರಿಜನರ ದೊಡ್ಡ ಪ್ರಮಾಣದ ವಿವಿದೋದ್ದೇಶ ಸಹಕಾರಿ ಸಂಘ (ನಿ) ರವರಿಗೆ (ಲ್ಯಾಂಪ್ಸ್ ಸೊಸೈಟಿ) ಅರಣ್ಯ ಸಂರಕ್ಷಣಾಧಿಕಾರಿಗಳು ನಿಗದಿ ಪಡಿಸಿದ ದರಕ್ಕೆ ಗುತ್ತಿಗೆಗೆ ನೀಡಲಾಗುತ್ತದೆ.

ಆ) ಸದರಿ ಸಹಕಾರಿ ಸಂಘಕ್ಕೆ ಬೆಳ್ತಂಗಡಿ ತಾಲ್ಲೂಕಿನಲ್ಲಿ ಕಾಡುತ್ಪತ್ತಿಯ ಗುತ್ತಿಗೆಯಿಂದ ಕೊಡುವುದರಿಂದ ಸರ್ಕಾರಕ್ಕೆ ೧ ವರ್ಷಕ್ಕೆ ಸರಾಸರಿ ರೂ. ೫೦,೦೦೦-೦೦ ಆದಾಯವಿದೆ.

ಶ್ರೀ ವಸಂತ ಬಂಗೇರ.—ಸನ್ಮಾನ್ಯ ಅಧ್ಯಕ್ಷರೇ, ಒಂದನೇ ಪ್ರಶ್ನೆಗೆ ಅರಣ್ಯ ಸಂರಕ್ಷಣಾಧಿಕಾರಿಗಳು ನಿಗಡಿಪಡಿಸಿದ ದರಕ್ಕೆ (ಲ್ಯಾಂಪ್ಸ್ ಸೊಸೈಟಿ)ಗೆ ಗುತ್ತಿಗೆಗೆ ನೀಡಲಾಗುತ್ತದೆ ಎಂದು ಹೇಳಿದ್ದಾರೆ. ಬೆಳ್ತಂಗಡಿಯಲ್ಲಿ ಖಾಸಗಿಯವರು ಕಂಟ್ರಾಕ್ಟ್ ಮಾಡುತ್ತಿದ್ದಾರೆ. ಖಾಸಗಿಯವರು ಹೆಚ್ಚು ಕಂಟ್ರಾಕ್ಟ್‌ನ್ನು ಮಾಡುತ್ತಿದ್ದರೆ ಸಂಬಂಧಪಟ್ಟವರ ಅಧಿಕಾರಿಗಳ ಮೇಲೆ ನೀವು ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?